ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೨ನೇ ಮಾರ್ಚ್ ೧೯೯೦, ಚೈತ್ರ ೧, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆ

ಅಧ್ಯಕ್ಷರು.—ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀಯುತ ಎಂ. ಮಲ್ಲಪ್ಪನವರು ೨೧ನೇ ಮಾರ್ಚ್ ೧೯೯೦ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ಹಿಂದೆ ವಿಧಾನಸಭೆಯ ಸದಸ್ಯರಾಗಿ ಸುಪ್ರಸಿದ್ಧ ವಕೀಲರಾಗಿಯೂ ಮತ್ತು ಹಲವಾರು ಸಂಘ ಸಂಸ್ಥೆಗಳಲ್ಲಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದ್ದರು. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು,

ಭರಮಸಾಗರದ ರಸ್ತೆ ರಿಪೇರಿ

೧೬೦. ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭರಮಸಾಗರ ವೀಸಲು ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಬರುವ ರಸ್ತೆಗಳು ಎಷ್ಟು ಹಾಗೂ ಯಾವುವು ?

ಆ) ಈ ರಸ್ತೆಗಳಿಗೆ ೧೯೮೭-೮೮, ೧೯೮೮-೮೯ ಮತ್ತು ೧೯೮೯-೯೦ನೇ ಆಯವ್ಯಯಗಳಲ್ಲಿ ಒದಗಿಸಿದ ಅನುದಾನದ ವೊತ್ತವೆಷ್ಟು ? ಮತ್ತು ಬಿಡುಗಡೆಯಾಗಿರುವ ಹಣವೆಷ್ಟು ?

ಇ) ಪ್ರತಿಯೊಂದು ರಸ್ತೆಗೆ ಖರ್ಚು ಮಾಡಿದ ಹಣವೆಷ್ಟು ? ಈಗ ರಸ್ತೆಗಳು ಸಂಪೂರ್ಣ ಕೆಟ್ಟಿದ್ದು, ಅವುಗಳನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜೆ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಭರಮಸಾಗರ ವೀಸಲು ಕ್ಷೇತ್ರದ ವ್ಯಾಪ್ತಿಯಲ್ಲಿ ೮ ರಸ್ತೆಗಳು ಲೋಕೋಪಯೋಗಿ ಇಲಾಖೆಯ ಉಸ್ತುವಾರಿಗೆ ಬರುತ್ತವೆ. ಅವುಗಳ ವಿವರಗಳನ್ನು ಅನುಬಂಧ-೧ರಲ್ಲಿ ಕೊಡಲಾಗಿದೆ.

ಆ) ಈ ರಸ್ತೆಗಳಿಗೆ ೮೭-೮೮, ೮೮-೮೯ ಹಾಗೂ ೮೯-೯೦ನೇ ಆಯವ್ಯಯಗಳಲ್ಲಿ ಒದಗಿಸಿದ ಅನುದಾನ ಹಾಗೂ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-೨ರಲ್ಲಿ ಕೊಡಲಾಗಿದೆ.

ಇ) ಪ್ರತಿಯೊಂದು ರಸ್ತೆಗೆ ಖರ್ಚು ಮಾಡಿದ ಹಣದ ವಿವರಗಳನ್ನು ಅನುಬಂಧ-೧ರಲ್ಲಿ ಕೊಡ ಲಾಗಿದೆ. ರಸ್ತೆಗಳು ಸಂಪೂರ್ಣವಾಗಿ ಕೆಟ್ಟಿರುವುದಿಲ್ಲ. ವಾರ್ಷಿಕ ನಿರ್ವಹಣೆಯಲ್ಲಿ ವಾಹನ ಸಂಚಾರ ದಿಂದ ಕೆಟ್ಟು ಹೋದ ಭಾಗಗಳನ್ನು ಹಣಕಾಸಿನ ಲಭ್ಯತೆಗನುಸಾರವಾಗಿ ದುರಸ್ತಿಪಡಿಸಿ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಇಡಲಾಗುತ್ತಿದೆ.

ಅನುಬಂಧ–೧

ಭರಮಸಾಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳು ಹಾಗೂ ಅವುಗಳಿಗೆ ೮೭–೮೮ ರಿಂದ ೮೯–೯೦ರ ವರೆಗೆ ಖರ್ಚು ಮಾಡಿದ ಹಣದ ವಿವರಗಳು.

ಕ್ರಮ ಸಂಖ್ಯೆ	ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿಯ ರಸ್ತೆಗಳು	ಉದ್ದ (ಕಿ.ಮೀ)	ಖರ್ಚು ಮಾಡಿದ ಹಣ (ಲಕ್ಷ ರೂ.ಗಳಲ್ಲಿ) ೮೭–೮೮	೮೮–೮೯	೮೯–೯೦ (ಫೆಬ್ರುವರಿ ೯೦ ವರೆಗೆ)
	ರಾಜ್ಯ ಹೆದ್ದಾರಿ				
೧	ಕಮಟಿ–ಕಡಮಡಗಿ ರಸ್ತೆ ಜಿಲ್ಲಾ ಮುಖ್ಯ ರಸ್ತೆಗಳು	೨೦.೦೦	೦.೬೦	೧.೨೬	೦.೯೯
೨	ಪಂಡರಹಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಳ್ಳುವ ರಸ್ತೆ ಹಂಪನೂರು, ಸಿರಿಗೆರೆ, ಬೊಮ್ಮನಹಳ್ಳಿ ಮಾರ್ಗ	೩೭.೮೦	೦.೫೨	೦.೪೯	೦.೯೧
೩	ಹಿರೇಬೆನ್ನೂರು, ಸಿರಿಗೆರೆ, ಸಾಸನೂರು	೧೩.೮೦	೦.೪೬	೦.೩೮	೦.೪೮
೪	ಭರಮಸಾಗರ–ಬಿಳಿಜೋಡು, ಬಸಪನಕೋಟೆ	೯.೦೦	೦.೨೮	೦.೩೨	೦.೪೦
೫	ಮುರಗಿ ಮಠ ರಸ್ತೆ	೩.೮೦	೦.೦೨	೦.೦೬	೦.೧೩
೬	ಅನಗೋಡು–ಅಣಬಿ ರಸ್ತೆ	೧೧.೩೦	೦.೩೪	೦.೪೪	೨.೧೮
೭	ದಾವಣಗೆರೆ–ಅಣಬಿ–ಜಗಳೂರು ರಸ್ತೆ	೨೧.೦೦	೦.೩೪	೧.೩೭	೨.೪೩
೮	ಅಣಬಿ–ಉಚ್ಚಂಗಿ–ದುರ್ಗ ರಸ್ತೆ	೩.೨೦	೦.೦೩	೦.೧೧	೦.೦೩
	ಒಟ್ಟು	೧೧೯.೧೦	೨.೫೯	೪.೪೩	೭.೯೫

ಅನುಬಂಧ–೨

ಭರಮಸಾಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ರಸ್ತೆಗಳಿಗೆ ೮೭–೮೮ ರಿಂದ ೮೯–೯೦ರ ವರೆಗೆ ಒದಗಿಸಿದ ಅನುದಾನ ಮತ್ತು ಬಿಡುಗಡೆಯಾದ ಹಣದ ವಿವರಗಳು:

ಕ್ರಮ ಸಂಖ್ಯೆ	ವರ್ಷ	ಆಯವ್ಯಯದಲ್ಲಿ ಒದಗಿಸಿದ ಅನುದಾನ	ಬಿಡುಗಡೆಯಾದ ಹಣ
		(ಲಕ್ಷ ರೂ.ಗಳಲ್ಲಿ)	
೧	೧೯೮೭–೮೮	೦.೬೩	೦.೬೩
೨	೧೯೮೮–೮೯	೬.೯೬	೬.೯೬
೩	೧೯೮೯–೯೦	೮.೧೪	೮.೧೪
	ಒಟ್ಟು	೧೫.೭೩	೧೫.೭೩

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕುಮಟ-ಕಡಮಡಗಿ ರಸ್ತೆ ಎಂದು ಹೇಳಿದ್ದಾರೆ. ಇದು ರಾಜ್ಯದ ಹೆದ್ದಾರಿ ರಸ್ತೆ ಎಂದು ಹೇಳಿದ್ದಾರೆ, ಆದರೆ ಇದು ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ. ಇದು ಯಾವ ರಸ್ತೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಭರಮಸಾಗರ ವಿಧಾನಸಭಾ ಕ್ಷೇತ್ರವಾಗಿದ್ದು ಅಲ್ಲಿ ಒಂದು ಪ್ರಾಂತೀಯ ಹೆದ್ದಾರಿ ಇದ್ದು ಅಲ್ಲಿ ಏಳು ಜಿಲ್ಲಾ ಮುಖ್ಯ ರಸ್ತೆಗಳು ಬರುತ್ತವೆ.

ಶ್ರೀ ಕೆ. ಶಿವಮೂರ್ತಿ.—ರಾಜ್ಯ ಹೆದ್ದಾರಿ ಎಂದು ಹೇಳಿದ್ದಾರೆ, ಇದು ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ. ಇದು ಯಾವುದು ? ಆಮೇಲೆ ಇಲಾಖೆಯವರು ರಸ್ತೆಗಳು ಸಂಪೂರ್ಣವಾಗಿ ಕೆಟ್ಟಿರುವುದಿಲ್ಲ ಸರಿ ಇದೆ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಇದು ವಿಧಾನಸಭಾ ಕ್ಷೇತ್ರ. ದಾವಣಗೆರೆ ತಾಲ್ಲೂಕು ಚಿತ್ರದುರ್ಗ ತಾಲ್ಲೂಕು ಇವೆರಡರಲ್ಲೂ ಯಾವ ತಾಲ್ಲೂಕಿನವರೂ ನೋಡುವ ಹಾಗೆ ಇಲ್ಲ. ಇವುಗಳನ್ನು ವಿಧಾನಸಭಾ ಕ್ಷೇತ್ರ ಮಾಡಿಬಿಟ್ಟಿದ್ದಾರೆ. ಇತ್ತ ಕಡೆ ಆಳಿಯನಿಗೂ ಸಿಗಬಾರದು, ಮಗಳಿಗೂ ಸಿಗಬಾರದು ಎನ್ನುವ ರೀತಿಯಲ್ಲಿ ನನ್ನ ಕ್ಷೇತ್ರವನ್ನು ವಿಧಾನಸಭಾ ಕ್ಷೇತ್ರವಾಗಿ ಇಟ್ಟಿದ್ದಾರೆ. ಈ ಕ್ಷೇತ್ರದಲ್ಲಿ ಬಸ್‌ಗಳು ಓಡಾಡಲಿಕ್ಕೆ ಜನ ಓಡಾಡಲಿಕ್ಕೂ ರಸ್ತೆ ಅಷ್ಟು ವ್ಯವಸ್ಥಿತವಾಗಿಲ್ಲ. ಇದರ ಬಗ್ಗೆ ಸಾರಿಗೆ ಇಲಾಖೆಯವರಿಗೆ ಕೇಳಿದರೆ ಅವರು ರಸ್ತೆಯನ್ನು ಮಾಡಿಸಿ ಎಂದು ಹೇಳುತ್ತಾರೆ. ರಸ್ತೆ ಮಾಡುವುದಕ್ಕೆ ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ತಿಳಿಸಿದರೆ ಅವರು ನಮ್ಮಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಈ ರಸ್ತೆಗಳನ್ನು ಮಾಡುವುದಕ್ಕೆ ಕೊಟ್ಟಿರುವ ಹಣದ ಬಗ್ಗೆ ಆಂಕಿ ಸಂಖ್ಯೆಯನ್ನು ನೋಡಿದರೆ ಬಹಳ ಕಡಿಮೆಯಾಗಿದೆ. ಮೊದಲು ರಸ್ತೆಯನ್ನು ಸರಿ ಮಾಡಿಸಿ ಆಮೇಲೆ ಊರಿಗೆ ಬನ್ನಿ ಎಂದು ಆ ಊರಿನವರು ಹೇಳಿದ್ದಾರೆ. ಆದ್ದರಿಂದ ರಸ್ತೆಗಳನ್ನು ಸರಿ ಮಾಡಿಸುವುದಕ್ಕೆ ಇನ್ನೂ ಸ್ವಲ್ಪ ಜಾಸ್ತಿ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಆ ಕ್ಷೇತ್ರದಲ್ಲಿ ರಸ್ತೆ ಹದಗೆಟ್ಟಿರತಕ್ಕಂಥದ್ದು ನಿಜ. ಆದರೆ ಸಂಚಾರಕ್ಕೆ ಆಡ್ಡಿಯಾಗುವಂಥ ರೀತಿಯಲ್ಲಿ ಕೆಟ್ಟಿಲ್ಲ. ಆದರೂ ಕೆಟ್ಟು ಹೋಗಿರತಕ್ಕಂಥ ರಸ್ತೆಗಳ ಬಗ್ಗೆ ರಿಪೇರಿ ಕಾರ್ಯವನ್ನು ತೆಗೆದುಕೊಂಡು ರಿಪೇರಿಗೆ ಆನುವು ಮಾಡಿಕೊಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತೇನೆ. ಬಿಳಿಜೋಡು, ಬಸವನಕೋಟೆ ರಸ್ತೆಯನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರವಾಗಿ ಈ ವರ್ಷದ ಆಯವ್ಯಯದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಂಟಿನೇ ಸಾಲಿಗೆ ಕಾಮಗಾರಿಯನ್ನು ಕೈಗೊಂಡು ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಸಿರಿಗೆರೆ ವಿದ್ಯಾ ಕೇಂದ್ರವಾಗಿದೆ. ಬೃಹತ್ ಮಠ ಇರತಕ್ಕ ಜಾಗ, ಇದು ಧರ್ಮ ಕೇಂದ್ರವಾಗಿರತಕ್ಕದ್ದರ ಜೊತೆಗೆ ಶಾಲಾ ಕಾಲೇಜುಗಳು ಇರತಕ್ಕ ರಸ್ತೆ, ಇದು ಬಹಳ ದುರಸ್ತಿ ಆಗಿದೆ. ನಾನು ಎಲ್ಲವನ್ನೂ ಕೇಳುವುದಿಲ್ಲ. ಒಂದು ಆಥವಾ ಎರಡನ್ನಾದರೂ ಮಾಡಿ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಎಲ್ಲದರಲ್ಲೂ ಮಾಡ ಬೇಕಾಗಿಲ್ಲ. ವಿಧಾನಸಭಾ ಕ್ಷೇತ್ರಕ್ಕೆ ಎಂಟು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಹಣಕಾಸಿನ ಇತಿಮಿತಿ ನನಗೆ ಗೊತ್ತಿದೆ ಆದ್ದರಿಂದ ಕೊನೆಯ ಪಕ್ಷ ಸಿರಿಗೆರೆ ಹಾಗೂ ಬೊಮ್ಮನಹಳ್ಳಿ ರಸ್ತೆಯನ್ನಾದರೂ ಸರಿ ಮಾಡಿಸಬೇಕು. ಅಲ್ಲಿ ಬಸ್ ಮೊನ್ನೆ ದಿವಸ ಬಿದ್ದು ಹೋಗಿದೆ.

ಅಧ್ಯಕ್ಷರು.—ತಾವು ಬರೆದು ಕೊಡಿ...

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಅದ್ಯತೆಯ ಮೇರೆಗೆ ಈ ಕೆಲಸವನ್ನು ಮಾಡಿಸಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ ೧೪೫೫ ಹಾಗೂ ೨೦೨ ಒಂದೇ ವಿಷಯ ಆಗಿದೆ. ಆದುದರಿಂದ ಎರಡೂ ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳು ಹಾಕಿದ ನಂತರ ಒಟ್ಟಿಗೆ ಉತ್ತರವನ್ನು ಕೊಡಬಹುದು.

ಅಧ್ಯಕ್ಷರು.—ಒಂದೇ ವಿಷಯ ಇದ್ದರೆ ಒಟ್ಟಿಗೆ ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಎರಡೂ ಪ್ರಶ್ನೆಗಳು ಹೇವಳಾವತಿ ಪ್ರಾಜೆಕ್ಟಿಗೆ ಸೇರಿದ ವಿಷಯಗಳೇ, ಆದರೆ ಇವರ ಕಂಟಿನ್‌ಷನ್ ಬೇರೆ ಅವರ ಕಂಟಿನ್‌ಷನ್ ಬೇರೆ.